## ಭಾರತದ ಸಂವಿಧಾನದ ಅವಲೋಕನ (7 ಘಟಕಗಳು)

**ಘಟಕ – 1 :** ಸಂವಿಧನದ ಸ್ವರೂಪ : ಸಂವಿಧಾನದ ಲಕ್ಷಣಗಳು, ಪ್ರಸ್ತಾವನೆ (ಪೀಠಿಕೆ), ರಾಜ್ಯ ನೀತಿಯ ನಿರ್ದೇಶಕ ತತ್ವಗಳು, ಭಾರತದ ಒಕ್ಕೂಟ–ಇತ್ಯಾದಿ

**ಘಟಕ – 2 :** ಮೂಲಭೂತ ಹಕ್ಕುಗಳು : ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧರ್ಮಿಕ ಸ್ವಾತಂತ್ರ್ಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಕ್ಕು, ಸಂವಿದಾನಾತ್ಮಕ ಪರಿಹಾರದ ಹಕ್ಕುಗಳು, ಸಮಂಜಸ ನಿಯಂತ್ರಣಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯ ತಡೆ ಕಾಯ್ದೆ, ರಾಷ್ಟ್ರೀಯ ಹಾಗೂ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಆಯೋಗ.

**ಘಟಕ – 3 :** ಕೇಂದ್ರ ಮತ್ತು ರಾಜ್ಯಗಳ ನಡುವೆ ಶಾಸನ ರಚನೆಯ ಅಧಿಕಾರಗಳ ಹಂಚಿಕೆ : ರಾಜ್ಯ ಹಾಗೂ ಕೇಂದ್ರದ ನಡುವೆ ಆಡಳಿತಾತ್ಮಕ ಹಾಗೂ ಹಣಕಾಸಿನ ಸಂಬಂಧಗಳು, ಸಂವಿಧಾನಬದ್ಧ ಸಂಸ್ಥೆಗಳ ಅಧಿಕಾರಗಳು ಹಾಗೂ ಕಾರ್ಯಗಳು, ರಾಜ್ಯಪಾಲರ ಅಧಿಕಾರ ಹಾಗೂ ಕರ್ತವ್ಯಗಳು, ಮಂತ್ರಿ ಮಂಡಲ ಹಾಗೂ ಕ್ಯಾಬಿನೆಟ್, ನ್ಯಾಯಾಂಗ ಪರಿಹಾರಗಳು.

**ಘಟಕ – 4 :** ಏಕಸದನ ಹಾಗೂ ದ್ವಿಸದನ ಶಾಸಕಾಂಗಳು: ಪ್ರಕಾರ್ಯಗಳು ಮತ್ತು ಉತ್ತರದಾಯತ್ವದ ಬಿಕ್ಕಟ್ಟು, ನಿಯೋಜಿತ ಶಾಸನಾಧಿಕಾರ, ಶಾಸನ ರಚನಾ ಪ್ರಕ್ರಿಯೆ ಹಾಗೂ ಶಾಸನ ಸಭೆ ಸಮಿತಿಗಳು, ನಿಯೋಜಿತ ಶಾಸನಾಧಿಕಋದ ಮೇಲೆ ಶಾಸಕಾಂಗ ಹಾಗೂ ನ್ಯಾಯಾಂಗದ ನಿಯಂತ್ರಣ, ಆಡಳಿತಾತ್ಮಕ ಕಾರ್ಯದ ಮೇಲೆ ನ್ಯಾಯಾಂಗ ಪರಾಮರ್ಶೆ, ಭಾರತದ ಮಹಾ ಲೆಕ್ಕ ತಪಾಸಿಗ ಹಾಗೂ ನಿಯಂತ್ರಕ (ಸಿಎಜಿ) ಮತ್ತು ಭಾರತದ ಅಟಾರ್ನಿ ಜನರಲ್ (ಎ.ಜಿ).

**ಘಟಕ – 5 :** ಸಂವಿಧಾನದ ಮುಖ್ಯ ತಿದ್ದುಪಡಿಗಳು : ಮೂಲಭೂತ ಸಿದ್ಧಾಂತ, ತುರ್ತು ಉಪಬಂಧಗಳು ಹಾಗೂ ವಿಕೇಂದ್ರೀಕರಣ, ಪಂಚಾಯತ್ ರಾಜ್, 73 ಹಾಗೂ 74ನೇ ತಿದ್ದುಪಡಿಗಳು.

**ಘಟಕ – 6 :** ಭಾರತದ ಜನ ಕಲ್ಯಾಣ ಆಡಳಿತ ವ್ಯವಸ್ಥೆ : ರಾಜ್ಯನೀತಿಯ ನಿರ್ದೇಶಕ ತತ್ವಗಳು ಹಾಗೂ ಅವುಗಳ ಸಂಬಂಧಗಳು, ಆಸ್ತಿಹಕ್ಕು, ಚುನಾವಣಾ ಆಯೋಗ, ಲೋಕಸೇವಾ ಆಯೋಗ, ಮಹಿಳಾ ಆಯೋಗ ಹಾಗೂ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಮಾನವ ಹಕ್ಕುಗಳ ಆಯೋಗ, ಮಾಹಿತಿ ಆಯೋಗ, ಹಣಕಾಸು ಆಯೋಗ, ಯೋಜನಾ ಆಯೋಗ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ, ಹಿಂದುಳಿದ ವರ್ಗಗಳ ಆಯೋಗ.

**ಘಟಕ – 7 :** ಕೇಂದ್ರ ಹಾಗೂ ರಾಜ್ಯದಡಿ ಬರುವ ಸೇವೆಗಳು : ಸರ್ಕಾರ ಹಾಗೂ ಸಾರ್ವಜನಿಕ ಅಧಿಕಾರಿಗಳ ಸಂವಿಧಾನಿಕ ಉಪಬಂಧಗಳು.

## ಸಂವಿಧಾನದ ಪ್ರಮುಖ ಲಕ್ಷಣಗಳು

## (Salient Features)

**ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ.**

1. **ಬೃಹತ್ ಸಂವಿಧಾನ :** ಭಾರತ ಸಂವಿಧಾನವು ಬೃಹತ್ ಗಾತ್ರದ ಸಂವಿಧಾನದವಾಗಿದೆ. 1950 ಜನವರಿ 26 ರಂದು ಜಾರಿಗೆ ಬಂದ ಸಂವಿಧಾನವು 22 ಭಾಗಗಳು, 395 ವಿಧಿಗಳು ಮತ್ತು 8 ಅನುಸೂಚಿಗಳನ್ನು ಒಳಗೊಂಡಿತ್ತು. ಪ್ರಸ್ತುತ ಸಂವಿಧಾನವು 22 ಭಾಗಗಳು, 395 ವಿಧಿಗಳು ಹಾಗೂ 12 ಅನುಸೂಚಿಗಳನ್ನೊಳಗೊಂಡಿದೆ. ನಮ್ಮ ಸಂವಿಧಾನದ ಬೃಹತ್ ಗಾತ್ರಕ್ಕೆ ಈ ಕೆಳಗಿನ ಕಾರಣಗಳನ್ನು ನಿಡಬಹುದು.

- ❖ ನಮ್ಮ ಸಂವಿಧಾನದ ನಿರ್ಮಾತೃಗಳು ವಿಶ್ವದ ಅನೇಕ ಸಂವಿಧಾನಗಳಿಂದ ಪಡೆದ ಹಲವಾರು ಅಂಶಗಳನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡಿದ್ದಾರೆ.
- ❖ ಸಂವಿಧಾನದ ನೀಲಿ ನಕಾಶೆ ಎಂದು ಕರೆಯಲಾಗುವ 1935 ರ ಭಾರತ ಸರ್ಕಾರದ ಕಾಯ್ದೆಯ ಬಹುತೇಕ ಮುಖ್ಯಾಂಶಗಳನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾಯ್ದೆಯೇ ಅತ್ಯಂತ ದೊಡ್ಡದಾಗಿರುವುದರಿಂದ ಸಹಜವಾಗಿ ಸಂವಿಧನದ ಗಾತ್ರವು ದೊಡ್ಡದಾಗಿದೆ.
- ❖ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಉದ್ಭವಿಸಬಹುದಾದ ಘರ್ಷಣೆಗಳನ್ನು ತಪ್ಪಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂಬಂಧಗಳ ಬಗೆಗೆ ಸಂವಿಧಾನದಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ. ನಮ್ಮ ಸಂವಿಧಾನವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗು ಇತರೆ ಹಿಂದುಳಿದ ಜಾತಿಗಳಿಗೆ ನೀಡಲಾಗಿರುವ ಮೀಸಲಾತಿ ಸೌಲಭ್ಯಗಳ ಬಗೆಗೆ ದೀರ್ಘವಾದ ವಿವರಣೆಯನ್ನೊಳಗೊಂಡಿದೆ.
- ❖ ಇತರೆ ಒಕ್ಕೂಟ ರಾಷ್ಟ್ರಗಳಂತೆ ಭಾರತದಲ್ಲಿ ರಾಜ್ಯಗಳು ತಮ್ಮದೇ ಆದ ಪ್ರತ್ಯೇಕವಾದ ಸಂವಿಧಾನವನ್ನು ಹೊಂದಿಲ್ಲ. ಇಡೀ ರಾಷ್ಟ್ರವು ಒಂದೇ ಒಂದು ಸಂವಿಧಾನವನ್ನು ಹೊಂದಿದೆ. ಇದು ಕೇಂದ್ರ ಸರ್ಕಾರದ ರಚನೆ, ಅಧಿಕಾರ ಮತ್ತು ಕಾರ್ಯಗಳಿಗೆ ಸಂಬಂಧಿಸಿದ ವಿವರಗಳೊಂದಿಗೆ ರಾಜ್ಯ ಸರ್ಕಾರಗಳ ರಚನೆ, ಅಧಿಕಾರ ಮತ್ತು ಕಾರ್ಯಗಳಿಗೆ ಸಂಬಂಧಿಸಿದ ವಿವರಗಳನ್ನೊಳಗೊಂಡಿದೆ.

- ❖ ನಮ್ಮ ಸಂವಿಧಾನವು ಕೇಂದ್ರಾಡಳಿತ ಪ್ರದೇಶಗಳ ಬಗೆಗೆ ವಿವರಗಳನ್ನು ಒಳಗೊಂಡಿದೆ.
- ❖ ನಮ್ಮ ಸಂವಿಧಾನಕ್ಕೆ ಇದುವರೆಗೆ ತರಲಾದ ತಿದ್ದುಪಡಿಗಳ ಮೂಲಕ ಕೆಲವು ಹೊಸ ಅಧ್ಯಾಯ ಹಾಗೂ ವಿಧಿಗಳನ್ನು ಸೇರಿಸಲಗಿದೆ.

**ಲಿಖಿತ ಸಂವಿಧಾನ :** ನಮ್ಮ ಸಂವಿಧಾನದ ಬಹು ಭಾಗವು ಲಿಖಿತ ರೂಪದಲ್ಲಿದೆ. ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ರಚನೆ ಅಧಿಕಾರ ಮತ್ತು ಕಾರ್ಯವ್ಯಾಪ್ತಿ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದೆ. ವಿವರಗಳು ಬರವಣಿಗೆಯ ರೂಪದಲ್ಲಿರುವುದನ್ನು ಕಾಣಬಹುದು.

**ಮೂಲಭೂತ ಹಕ್ಕುಗಳು :** ಮೂಲಭೂತ ಹಕ್ಕುಗಳು ವ್ಯಕ್ತಿತ್ವ ವಿಕಸನದ ಅವಿಭಾಜ್ಯ ಅಂಗಗಳಾಗಿವೆ. ಭಾರತ ಸಂವಿಧಾನದ ಮೂರನೆಯ ಭಾಗವು ತನ್ನ ಪ್ರಜೆಗಳಿಗೆ ಸ್ವಾತಂತ್ರ್ಯದ ಹಕ್ಕು, ಸಮಾನತೆಯ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಶೈಕ್ಷಣಿಕ ಹಾಗು ಸಾಂಸ್ಕೃತಿಕ ಹಕ್ಕು, ಸಂವಿಧಾನಾತ್ಮಕ ಪರಿಹಾರಗಳ ಹಕ್ಕು, ಹೀಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಸಂವಿಧನವು ಮೂಲಭೂತ ಹಕ್ಕುಗಳ ರಕ್ಷಣೆಯ ಜವಾಬ್ದಾರಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿದೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವನ್ನು 'ಮೂಲಭೂತ ಹಕ್ಕುಗಳ ರಕ್ಷಕ' ಎಂದು ಕರೆಯಲಾಗುತ್ತದೆ.

## ರಾಷ್ಟ್ರಧ್ವಜ

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಹೋರಾಟಗಾರರು ಮಧ್ಯದಲ್ಲಿ ಚರಕವಿದ್ದ ತ್ರಿವರ್ಣ ಧ್ವಜವನ್ನೇ ಹಾರಿಸಿ, ಭಾರತ್ ಮಾತಾಕೀ ಜೈ ಘೋಷಣೆ ಕೂಗುತ್ತಾ ಜೈಲು ಸೇರಿದರು. ಈ ಧ್ವಜವನ್ನೇ ರಾಷ್ಟ್ರಧ್ವಜ ಮಾಡಬೇಕೆಂಬ ಸಲಹೆ ಸಂವಿಧಾನ ರಚನಾ ರಾಜೀಸೂತ್ರ ಹೊರಬಂತು. ಸಾರಾನಾಥ್‌ನ ಮ್ಯೂಸಿಯಂನ ಅಶೋಕ ಸ್ತಂಭದಲ್ಲಿ ಅಳವಡಿಸಿರುವ 24 ಕಡ್ಡಿಗಳ ಧರ್ಮ ಚಕ್ರವನ್ನು ಚರಕದ ಜಾಗದಲ್ಲಿ ಹಾಕುವಂತೆ ನಿರ್ಧರಿಸಲಾಯಿತು. ಇದು ಎಲ್ಲರಗೂ ಒಪ್ಪಿಗೆಯಾಯಿತು.

ನಮ್ಮ ರಾಷ್ಟ್ರಧ್ವಜದ ಅಗಲ 2 ಅಡಿಗಳು ಮತ್ತು ಉದ್ದ ಮೂರು ಅಡಿಗಳು. ಅಗಲದ 24 ಇಂಚುಗಳನ್ನು ಎಂಟು ಇಂಚುಗಳ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೇಲುಗಡೆ ಕೇಸರಿ ಬಣ್ಣ, ಮಧ್ಯದಲ್ಲಿ ಬಿಳಿಯ ಬಣ್ಣ, ಕೆಳಗೆ ಹಸಿರು ಬಣ್ಣ ಇದೆ. ಕೇಸರಿ ಬಣ್ಣ ಸ್ಥೈರ್ಯ ಮತ್ತು ತ್ಯಾಗದ ಸಂಕೇತವಾದರೆ, ಬಿಳಿ ಬಣ್ಣ ಪರಿಶುದ್ಧತೆಯ ಸಂಕೇತ, ಇದರ ಮಧ್ಯೆ ಅಳವಡಿಸಿರುವ ಅಶೋಕನ ಧರ್ಮಚಕ್ರ, ಸರ್ವಧರ್ಮಗಳ ಸಂಕೇತವೇ ಆಗಿವೆ. ಶ್ವೇತವರ್ಣ ಶಾಂತಿ ಮತ್ತು ಸತ್ಯದ ಸಂಕೇತವೂ ಹೌದು. ಕೆಳಗಿರುವ ಕಡು ಹಸಿರು ಬಣ್ಣ ಚಲನೆಯ ಅರ್ಥಾತ್ ಪ್ರಗತಿಯ, ಹಸಿರು ಕ್ರಾಂತಿಯ ಸಂಕೇತವೂ ಹೌದು. 22–7–1947 ರಂದು ಸಂವಿಧಾನ ರಚನಾ ಸಭೆ ಇದನ್ನು ಒಪ್ಪಿಕೊಂಡಿತು. ಇದೇ ನಮ್ಮ ರಾಷ್ಟ್ರಧ್ವಜವಾಯಿತು.

ಈ ಧ್ವಜಕ್ಕೆ ಸಂಬಂಧಿಸಿದ ನಿಯಮಗಳಿವೆ. ಅದನ್ನು ರಾಷ್ಟ್ರೀಯ ಧ್ವಜದ ನಿಯಮ (National Flab Code) ಗಳೆಂದೇ ಕರೆಯುತ್ತಾರೆ.

**ಮೂಲಭೂತ ಕರ್ತವ್ಯಗಳು** : 1947 ರ 42ನೇ ತಿದ್ದುಪಡಿಯ ಮೂಲಕ ಸಂವಿಧಾನಕ್ಕೆ ಮೂಲಭೂತ ಕರ್ತವ್ಯಗಳ ಪಟ್ಟಿಯನ್ನು ಸೇರಿಸಲಾಯಿತು. ಭಾರತ ಸಂವಿದಾನದ 4–ಎ ಭಾಗದಲ್ಲಿನ 51ಎ ವಿಧಿಯಡಿಯಲ್ಲಿ ಹನ್ನೊಂದು ಕರ್ತವ್ಯಗಳನ್ನು ಕಾಣಬಹುದು. ಅವುಗಳು ಈ ಕೆಳಗಿನಂತಿವೆ.

- ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
- ಸ್ವಾತಂತ್ರ್ಯ ಚಳುವಳಿಯ ಉದಾತ್ತ ಆದರ್ಶಗಳನ್ನು ಪಾಲಿಸುವುದು.
- ಭಾರತದ ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯುವುದು ಹಾಗೂ ಕಾಪಾಡುವುದು.
- ಕರೆ ಬಂದಾಗ ರಾಷ್ಟ್ರವನ್ನು ರಕ್ಷಿಸುವುದು ಮತ್ತು ದೇಶ ಸೇವೆ ಮಾಡುವುದು.
- ಭಾರತೀಯರಲ್ಲಿ ಸಾಮರಸ್ಯ ಮತ್ತು ಭ್ರಾತೃತ್ವ ಭಾವನೆಯನ್ನು ಬೆಳೆಸುವುದು ಹಾಗೂ ಮಹಿಳೆಯರಿಗೆ ಗೌರವಕ್ಕೆ ಚ್ಯುತಿಯುಂಟುಮಾಡುವ ಆಚರಣೆಗಳನ್ನು ತ್ಯಜಿಸುವುದು.
- ನಮ್ಮ ಸಮ್ಮಿಶ್ರ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು.
- ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಜೀವಿಗಳನ್ನೊಳಗೊಂಡ ನೈಸರ್ಗಿಕ ಪರಿಸರವನ್ನು ರಕ್ಷಿಸಿ ಅಭಿವೃದ್ಧಿಪಡಿಸುವುದು.
- ವೈಜ್ಞಾನಿಕ ಹಾಗೂ ಮಾನವೀಯ ಗುಣಗಳನ್ನು ಮತ್ತು ವಿಚಾರಣಾ ಹಾಗೂ ಸುಧಾರಣಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು.
- ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.
- ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಪ್ರಾವೀಣ್ಯತೆಯನ್ನು ಪ್ರದರ್ಶಿಸಿ ರಾಷ್ಟ್ರದ ಪ್ರಗತಿಗೆ ಶ್ರಮಿಸುವುದು.
- 6 ರಿಂದ 14 ವರ್ಷದೊಳಗಿನ ಮಕ್ಕಳನ್ನು ಪಾಲಕರು ಕಡ್ಡಾವಾಗಿ ಶಾಲೆಗೆ ಕಳುಹಿಸತಕ್ಕದ್ದು.

## ***ರಾಷ್ಟ್ರಗೀತೆ***

ರಾಷ್ಟ್ರಗೀತೆಯ ವಿಷಯದಲ್ಲೂ ಸಾಕಷ್ಟು ಚರ್ಚೆ ನಡೆಯಿತು. ಸ್ವಾತಂತ್ರ್ಯ ಹೋರಾಟಗಾರರು ಆಗ ಹಾಡುತ್ತಿದ್ದ ಗೀತೆ ಬಂಕಿಮ್ ಚಂದ್ರರು ರಚಿಸಿದ ವಂದೇ ಮಾತರಂ. ಇದನ್ನೇ ರಾಷ್ಟ್ರಗೀತೆ ಮಾಡಬೇಕೆಂಬ

ಸಲಹೆ ಸಂವಿಧನ ರಚನಾ ಸಭೆಯ ಮುಂದೆ ಬಂತು. ಅದು ಒಂದು ಮೇಲ್ವರ್ಗದವರಿಗೆ ಹಾಗೂ ಒಂದು ಪಕ್ಷಕ್ಕೆ ಸಂಬಂಧಿಸಿದ್ದೆಂಬ ಟೀಕೆಯೂ ಬಂತು. ರವೀದ್ರನಾಥ ಠಾಕೂರರ 'ಜನಗಣಮನ ಅಧಿನಾಯಕ ಜಯಹೇ' ಮೇಲೆ ಸಲ್ಲದ ಟೀಕೆ ಮಾಡಲಾಯಿತು. ನಂತರ ಪಂಡಿತ ರವಿಶಂಕರ ನೇತೃತ್ವದ ತಜ್ಞರ ಸಮಿತಿ ರವೀಂದ್ರನಾಥ ಠಾಕೂರರ ಗೀತೆ ಪಾಶ್ಚಿಮಾತ್ಯ ವಾದ್ಯಗಾರರ ದೃಷ್ಟಿಯಿಂದಲೂ ಸೂಕ್ತವೆಂಬ ಅಭಿಪ್ರಾಯ ನೀಡಿತು. ಅದರ ಫಲವಾಗಿ ರವೀಂದ್ರರ ಗೀತೆ ರಾಷ್ಟ್ರದ ಗೀತೆಯಾಗಿ, ಬಮಕಿಮ ಚಂದ್ರ ಚಟಜಿಯವರ 'ವಂದೇಮಾತರಂ' 'ರಾಷ್ಟ್ರದ ಹಾಡಿನ' ಸ್ಥಾನಮಾನವನ್ನು ಪಡೆಯಿತು. ಸಂವಿಧನ ರಚನಾ ಸಭೆ 24–01–1950 ರಂದು ರಾಷ್ಟ್ರಗೀತೆಗೆ ತನ್ನ ಒಪ್ಪಿಗೆ ನೀಡಿತು.

5. **ರಾಜ್ಯ ನೀತಿ ನಿರ್ದೇಶಕ ತತ್ವಗಳು :** ಭಾರತ ಸಂವಿಧಾನದ ನಾಲ್ಕನೆಯ ಭಾಗವು ರಾಜ್ಯ ನಿರ್ದೇಶಕ ತತ್ವಗಳನ್ನೊಳಗೊಂಡಿದೆ. ಈ ತತ್ವಗಳನ್ನು ಐರಿಷ್ ಸಂವಿಧಾನದಿಂದ ಎರಡವಲು ಪಡೆಯಲಾಗಿದೆ. ರಾಜ್ಯ ನೀತಿ ನಿರ್ದೇಶಕ ತತ್ವಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಸಂವಿಧಾನವು ನೀಡಲಾದ ನಿರ್ದೇಶನಗಳ ಸ್ವರೂಪದಲ್ಲಿವೆ. ಇವುಗಳು ನಯಾಯ ರಕ್ಷಿತವಾದವುಗಳಲ್ಲದಿದ್ದರೂ ದೇಶದ ಆಡಳಿತಕ್ಕೆ ಮೂಲ ನಿಯಮಗಳಾಗಿವೆ. ಆದ್ದರಿಂದ ಕಾನೂನುಗಳನ್ನು ರೂಪಿಸುವಾಗ, ನೀತಿಗಳನ್ನು ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಮತ್ತು ಆಡಳಿತ ನಡೆಸುವಾಗ ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಿಕೊಳ್ಳುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆದ್ಯ ಕರ್ತವ್ಯವಾಗಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನ ಶಿಲ್ಪಿಯಾದ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಈ ತತ್ವಗಳು ಸರ್ಕಾರ ಹೇಗೆ ಕಾರ್ಯಪ್ರವೃತ್ತವಾಗಬೇಕು ಎಂಬುದರ ಮಾರ್ಗಸೂಚಿಗಳಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

6. **ಎರವಲು ಸಂವಿಧಾನ :** ನಮ್ಮ ಸಂವಿಧಾನವು ವಿಶ್ವದ ವಿವಿಧ ಸಂವಿಧಾನಗಳಿಂದ ಅನೇಕ ಲಕ್ಷಣಗಳನ್ನು ಎರವಲು ಪಡೆದುಕೊಂಡಿದೆ. ಆದ್ದರಿಂದ ಇದನ್ನು ಎರವಲು ಸಂವಿಧಾನ (Borrowed Constitution) ಎಂದು ಕರೆಯುತ್ತಾರೆ. ಉದಾಹರಣೆಗೆ, ಕಾನೂನಿನ ಆಳ್ವಿಕೆ, ಏಕಪೌರತ್ವ, ಸಂಸದೀಯ ಪದ್ಧತಿಗಳನ್ನು ಗ್ರೇಟ್ ಬ್ರಿಟನ್ ಸಂವಿಧಾನದಿಂದಲೂ, ಕೇಂದ್ರ ಹಾಗೂ ರಾಜ್ಯಗಳ ನಡುವಣ ಅಧಿಕಾರ ಹಂಚಿಕೆಯ ಮಾದರಿಯನ್ನು ಕೆನಡಾ ಸಂವಿಧಾನದಿಂದಲೂ, ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಐರಿಷ್ ಸಂವಿಧಾನದಿಂದಲೂ, ಮೂಲಭೂತ ಕರ್ತವ್ಯಗಳ ಪಟ್ಟಿಯನ್ನು ಹಿಂದಿನ ಸೋವಿಯತ್ ಒಕ್ಕೂಟದ ಸಂವಿಧಾನದಿಂದಲೂ ಎರವಲು ಪಡೆದುಕೊಳ್ಳಲಾಗಿದೆ.

| ಸಂವಿಧನದ ಮೂಲಗಳು | | | |
|---|---|---|---|
| | **ಮೂಲಗಳು** | | **ಎರವಲು ಪಡೆದ ಲಕ್ಷಣಗಳು** |
| 1 | ಭಾರತ ಸರ್ಕಾರ ಕಾಯ್ದೆ, 1935 | – | ಒಕ್ಕೂಟ ವ್ಯವಸ್ಥೆ, ರಾಜ್ಯಪಾಲರ ಹುದ್ದೆ, ನ್ಯಾಯಾಂಗ ವ್ಯವಸ್ಥೆ, ಸಾರ್ವಜನಿಕ ಸೇವಾ ಆಯೋಗಗಳು, ತುರ್ತು ಪರಿಸ್ಥಿತಿ ಉಪಬಂಧಗಳು ಮತ್ತು ಆಡಳಿತಾತ್ಮಕ ವಿವರಣೆಗಳು |
| 2 | ಬ್ರಿಟಿಷ್ ಸಂವಿಧಾನ | – | ಸಂಸದೀಯ ಪದ್ಧತಿ, ಕಾನೂನಿನ ಅದಿಪತ್ಯ, ಶಾಸನೀಯ ನಿಯಮಗಳು, ಏಕಪೌರತ್ವ, ಕ್ಯಾಬಿನೆಟ್ ಪದ್ಧತಿ, ಸಂಸದೀಯ ಸೌಲಭ್ಯಗಳು ಮತ್ತು ದ್ವಿ–ಸದನ ಶಾಸಕಾಂಗ ಪದ್ಧತಿ |
| 3 | ಅಮೆರಿಕಾ ಸಂವಿಧಾನ | – | ಪ್ರಸ್ತಾವನೆ, ಮೂಲಭೂತ ಹಕ್ಕುಗಳು, ನ್ಯಾಯಾಂಗದ ಸ್ವಾತಂತ್ರ್ಯ, ನ್ಯಾಯಿಕ ವಿಮರ್ಶೆ, ರಾಷ್ಟ್ರಾಧ್ಯಕ್ಷರ ಮಹಾಭಿಯೋಗ, ಸವೋಚ್ಛ ನ್ಯಾಯಾಲಯ ಮತ್ತು ಉಚ್ಛ ನ್ಯಾಯಾಲಯಗಳ ನ್ಯಾಯಾಧೀಶರ ಪದಚ್ಯುತಿ, ಉಪರಾಷ್ಟ್ರಾಧ್ಯಕ್ಷರ ಹುದ್ದೆ. |
| 4 | ಐರ್ಲೆಂಡ್ ಸಂವಿಧಾನ | – | ರಾಜ್ಯ ನಿರ್ದೇಶಕ ತತ್ವಗಳು, ರಾಜ್ಯಸಭೆಗೆ ಸದಸ್ಯರ ನಾಮಕರಣ, ರಾಷ್ಟ್ರಾಧ್ಯಕ್ಷರ ಚುನಾವಣಾ ವಿಧಾನ. |
| 5 | ಕೆನಡಾ ಸಂವಿಧಾನ | – | ಒಕ್ಕೂಟ ವ್ಯವಸ್ಥೆಯ ಮಾದರಿ (ಪ್ರಬಲ ಕೇಂದ್ರ ಸರ್ಕಾರದಿಂದ ಕೂಡಿದ ಒಕ್ಕೂಟ ವ್ಯವಸ್ಥೆ), ಶೇಷಾಧಿಕಾರಗಳನ್ನು ಕೇಂದ್ರ ಸರ್ಕಾರಕ್ಕೆ ನಿಡುವುದು, ಕೇಂದ್ರದಿಂದ ರಾಜ್ಯಪಾಲರ ನೇಮಕಾತಿ, ಸರ್ವೋಚ್ಛ ನ್ಯಾಯಾಲಯದ ಸಲಹಾ ವ್ಯಾಪ್ತಿ |
| 6 | ಆಸ್ಟ್ರೇಲಿಯಾ ಸಂವಿಧನ | – | ಸಮವರ್ತಿಪಟ್ಟಿ, ವ್ಯಾಪಾರ, ವಾಣಿಜ್ಯಗಳಿಗೆ ಸಂಬಂಧಿಸಿದ ಸ್ವಾತಂತ್ರ್ಯ, ಸಂಸತ್ತಿನ ಎರಡು ಸದನಗಳ ಜಂಟಿ ಸಭೆ. |
| 7 | ಜರ್ಮನಿಯ ವೀಮಿಯರ್ ಸಂವಿಧಾನ | – | ತುರ್ತು ಪರಿಸ್ಥಿತಿ ಜಾರಿಯಲ್ಲಿರುವಾಗ ಮೂಲಭುತ ಹಕ್ಕುಗಳನ್ನು ಅಮಾನತುಗೊಳಿಸುವುದು |
| 8 | ಸೋವಿಯತ್ ಸಂವಿಧಾನ (ಇಂದಿನ ರಷ್ಯಾ) | – | ಮೂಲಭುತ ಕರ್ತವ್ಯಗಳು ಮತ್ತು ಪ್ರಸ್ತಾವನೆಯಲ್ಲಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ |
| 9 | ಫ್ರೆಂಚ್ ಸಂವಿಧಾನ | – | ಪ್ರಸ್ತಾವನೆಯಲ್ಲಿರುವ ಸ್ವಾತಂತ್ರ್ಯ, ಸಮಾನತೆ ಭ್ರಾತೃತ್ವ |
| 10 | ದಕ್ಷಿಣ ಆಫ್ರಿಕಾ ಸಂವಿಧಾನ | – | ಸಂವಿಧಾನದ ತಿದ್ದುಪಡಿ ವಿಧಾನ ಮತ್ತು ರಾಜ್ಯಸಭಾ ಸದಸ್ಯರ ಚುನಾವಣಾ ವಿಧಾನ |

**7. ಸಂಸದೀಯ ಸರ್ಕಾರ ಪದ್ಧತಿ :** ಭಾರತ ಸಂವಿಧಾನವು ಕೇಂದ್ರ ಹಾಗೂ ರಾಜ್ಯಗಳಲ್ಲಿ ಸಂಸದೀಯ ಪದ್ದತಿಗೆ ಅವಕಾಶ ಮಾಡಿಕೊಟ್ಟಿದೆ. ಕೇಂದ್ರ ಹಾಗೂ ರಾಜ್ಯಗಳಲ್ಲಿ ಕಾರ್ಯಾಂಗವು ಶಾಸಕಂಗಕ್ಕೆ ಹೊಣೆಯಾಗಿರುತ್ತದೆ. ಕಾರ್ಯಾಂಗವು ಶಾಸಕಾಂಗದ ವಿಶ್ವಾಸವನ್ನು ಹೊಂದಿರುವವರೆಗೆ ಮಾತ್ರ ಅಧಿಕಾರದಲ್ಲಿ ಮುಂದುವರೆಯುತ್ತದೆ. ಶಾಸಕಾಂಗದ ವಿಶ್ವಾಸವನ್ನು ಕಳೆದುಕೊಂಡ ತಕ್ಷಣ ಅಧಿಕಾರವನ್ನು ಕಳೆದುಕೊಳ್ಳುತ್ತದೆ.

## ರಾಷ್ಟ್ರಲಾಂಛನ

ಸಾರನಾಥ್ ಮ್ಯೂಸಿಯಂನಲ್ಲಿರುವ ತುಂಬಾ ಚೆನ್ನಾಗಿ ಪಾಲಿಷ್ ಆದ ಮರಳುಗಲ್ಲಿನ ಅಶೋಕ ಸ್ಥಂಭವೇ ಲಾಂಧನಕ್ಕೂ ಪ್ರಮುಖವಫಿದೆ. ರಾಷ್ಟ್ರಲಾಂಛನವನ್ನು 26–1–1950 ರಂದು ಅಂಗೀರಿಸಲಾಯಿತು. ಮೂಲ ಅಶೋಕ ಸ್ತಂಭದ ಮೇಲ್ಭಾಗದಲ್ಲಿ ನಾಲ್ಕು ಸಿಂಹಗಳು ಬೆನ್ನಿಗೆ ಬೆನ್ನು ಮಾಡಿಕೊಂಡು ಕುಳಿತಿವೆ. ಇವು ಲಾಂಛನ ಪೀಠದ ಮೇಲೆ ಕುಳಿತಿವೆ. ಲಾಂಛನ ಪೀಠದ ಕೆಳಭಾಗದಲ್ಲಿ ಆನೆ, ಓಡುತ್ತಿರುವ ಕುದುರೆ, ಗೂಳಿ ಮತ್ತು ಸಿಂಹಗಳ ಕೆತ್ತನೆ ಇದೆ. ಪ್ರಾಣಿಗಳ ನಡುವೆ ಅಶೋಕ ಚಕ್ರವಿದೆ. ಇವುಗಳಡಿಯಲ್ಲಿ ಗಂಟೆಯಾಕಾರದ ಕಮಲವಿದೆ.

ಆದರೆ ರಾಷ್ಟ್ರ ಅಳವಡಿಸಿರುವ ಲಾಂಛನದಲ್ಲಿ ನಾವು ಮೂರು ಸಿಂಹಗಳ ಮುಖವನ್ನು ಮಾತ್ರ ನೋಡುತ್ತೇವೆ. ಅದರ ಕೆಳಗೆ ಬಲಭಾಗಕ್ಕೆ ಗೂಳಿ ಮತ್ತು ಎಡಭಾಗಕ್ಕೆ ಕುದರೆ ಇವುಗಳ ನಡುವೆ ಅಶೋಕ ಚಕ್ರ ಮತ್ತು ಗೂಳಿ ಕುದುರೆಗಳ ಪಕ್ಕದಲ್ಲಿ ಭಾಗಶಃ ಚಕ್ರವನ್ನು ಕಾಣುತ್ತೇವೆ. ಲಂಛನ ಪೀಠದ ಕೆಳಗೆ ದೇವನಾಗರೀ ಲಿಪಿಯಲ್ಲಿ ಮುಂಡಕೋಪನಿಷತ್ತಿನಿಂದ ತೆಗೆದುಕೊಂಡ 'ಸತ್ಯಮೇವ ಜಯತೆ' ಎಂಬುದನ್ನು ಕೆತ್ತಲಾಗಿದೆ. ಇದೇ ನಮ್ಮ ರಾಷ್ಟ್ರ ಲಾಂಛನ.

**ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ :** ಭಾರತದಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ದತಿ ಆಚರಣೆಯಲ್ಲಿದೆ. ಈ ಪದ್ಧತಿಯ ಪ್ರಕಾರ ಜಾತಿ, ಮತ, ಲಿಂಗ, ಸಾಮಾಜಿ ಸ್ಥಾನಮಾನ ಮುಂತಾದುವುಗಳ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ 18 ವರ್ಷ ಮೇಲ್ಪಟ್ಟ ಎಲ್ಲ ಪ್ರಜೆಗಳಿಗೆ ಮತದಾನದ ಹಕ್ಕನ್ನು ನೀಡಲಾಗಿದೆ. 1989ರಲ್ಲಿ 61ನೇ ತಿದ್ದುಪಡಿಯ ಮೂಲಕ ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಸಲಾಯಿತು. ಇದು ಪ್ರಜಾಪ್ರಭುತ್ವವನ್ನು ಬಲಗೊಳಿಸುವಲ್ಲಿ ಕ್ರಾಂತಿಕಾರ ಹೆಜ್ಜೆಯಾಗಿದೆ. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯ ಫಲವಾಗಿ ಭಾರತವು ವಿಶ್ವದಲ್ಲೇ ಅತ್ಯಂತ ದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿ ಹೊರಹೊಮ್ಮಿದೆ.

**ನ್ಯಾಯಿಕ ವಿಮರ್ಶೆ :** ನ್ಯಾಯಿಕ ವಿಮರ್ಶೆಯು ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳಲೊಂದಾಗಿದೆ. ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗಗಳ ಅದಿಕಾರ ಹಾಗೂ ಕಾರ್ಯಗಳ ಸಂವಿಧನ ಬದ್ಧತೆಯನ್ನು ವಿಮರ್ಶಿಸುವ ಅದಿಕಾರವನ್ನು ಹೊಂದಿದೆ. ಸಂವಿಧಾನವನ್ನು ಉಲ್ಲಂಘಿಸುವ ಶಾಸಕಾಂಗದ ಕಾನೂನುಗಳನ್ನು ನ್ಯಾಯಾಂಗವು ಸಂವಿಧಾನ ಬಾಹಿರ, ಅಸಿಂಧು ಎಂದು ಘೋಷಿಸುತ್ತದೆ. ಅಲ್ಲದೆ ಸಂವಿಧಾನವನ್ನು ಉಲ್ಲಂಘಿಸುವ ಕಾರ್ಯಾಂಗದ ಆಜ್ಞೆಗಳು, ಆದೇಶಗಳು ಹಾಗೂ ನಿರ್ಧಾರಗಳನ್ನು ನ್ಯಾಯಾಂಗವು ಸಂವಿಧಾನ ಬಾಹಿರ, ಅಸಿಂಧು ಎಂದು ಘೋಷಿಸುತ್ತದೆ.

1. **ಏಕಪೌರತ್ವ :** ಭಾರತದ ಸಂವಿಧನವು ಏಕಪೌರತ್ವ ಪದ್ದತಿಯನ್ನು ಅಳವಡಿಸಿಕೊಂಡಿದೆ. ಭಾರತದಲ್ಲಿ ಒಬ್ಬ ವ್ಯಕ್ತಿಯು ರಾಷ್ಟ್ರೀಯ ಪೌರತ್ವವನ್ನು ಹೊಂದಿದ್ದಾನೆಯೇ ಹೊರತು, ರಾಜ್ಯದ ಪೌರತ್ವವನ್ನು ಹೊಂದಿರುವುದಿಲ್ಲ. ಭಾರತೀಯರಲ್ಲಿ ಎಕತೆ, ಸಮಗ್ರತೆ ಮತ್ತು ಅವಿಭಾಜ್ಯ ನಿಷ್ಠೆ ಮುಂತಾದ ಉದಾತ್ರ ಮನೋಭಾವನೆಗಳನ್ನು ಬೆಳೆಸಲು ಎಕಪೌರತ್ವ ಪದ್ಧತಿಯು ಪೂರಕವಾಗಿದೆ.
2. **ಪ್ರಜಾಪ್ರಭುತ್ವ :** ಭಾರತವು ವಿಶ್ವದಲ್ಲಿಯೇ ಬೃಹತ್ ಪ್ರಜಾಸತ್ತೆಯಾಗಿದೆ. ಭಾರತ ದೇಶದಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ದತಿ ಮೂಲಕ ಚುನಾಯಿತರಾದ ಜನ ಪ್ರತಿನಿಧಿಗಳು ಪ್ರಜೆಗಳ ಪರವಾಗಿ ರಾಜ್ಯಾಡಳಿತದಲ್ಲಿ ಭಾಗವಹಿಸುತತಾರೆ (326ನೇ ವಿಧಿ). ಪ್ರಜೆಗಳು ಆಡಳಿತದಲ್ಲಿ ಪರೋಕ್ಷ್ವಾಗಿ ಭಾಗವಹಿಸುವುದನ್ನು ಕಾಣಬಹುದು.
3. **ಜಾತ್ಯತೀತತೆ :** 1976 ರಲ್ಲಿ 42ನೇ ತಿದ್ದುಪಡಿ ಕಾಯ್ದೆಯ ಮೂಲಕ ಜಾತ್ಯತೀತತೆ ಎಂಬ ಪದವನ್ನು ಸಂವಿಧಾನಕ್ಕೆ ಸೇರಿಸಲಾಯಿತು. ಒಂದು ಜಾತ್ಯತೀತ ರಾಷ್ಟ್ರವಾಗಿದೆ. ಸಂವಿಧಾನವು ತನ್ನ ಪ್ರಜೆಗಳಿಗೆ ಧರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ. ಆದ್ದರಿಂದ ಒಬ್ಬ ಜಾತ್ಯತೀಯನು ತನ್ನ ಮನಸಾಕ್ಷಿಗನುಗುಣವಾಗಿ ಯಾವುದೇ ದರ್ಮವನ್ನುಪಾಲಿಸುವ, ಆರಾಧಿಸುವ ಹಾಗೂ ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದಾನೆ. ಸರ್ಕಾವರು ಪ್ರಜೆಗಳ ಧಾರ್ಮಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಭಾರತವು ತನ್ನದೇ ಆದ ಜಾತಿ ಧರ್ಮವನ್ನು ಹೊಂದಿರುವುದಿಲ್ಲ. ನಮ್ಮ ದೇಶದಲ್ಲಿ ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣಲಾಗುತ್ತದೆ.
4. **ಸಾರ್ವಭೌಮ ರಾಷ್ಟ್ರ :** ಭಾರತವು ಸಾರ್ವಭೌಮ ರಾಷ್ಟ್ರವಾಗಿದೆ. ಇದು ಆಂತರಿಕ ಶ್ರೇಷ್ಠತೆಯನ್ನು ಹಾಗು ಬಾಹ್ಯ ಸ್ವಾತಂತ್ರ್ಯವನ್ನು ತಂದುಕೊಂಡಿದೆ. ಅಂದರೆ ನಮ್ಮ ರಾಷ್ಟ್ರವು ಆಂತರಿಕವಾಗಿ ಸರ್ವೋಚ್ಚ ಅಧಿಕಾರವನ್ನು ಹಾಗು ಬಾಹ್ಯವಾಗಿ ಅನ್ಯ ರಾಷ್ಟ್ರಗಳಿಂದ ಸಂಪೂರ್ಣವಾಗಿ ಸ್ವಾತಂತ್ರ್ಯವನ್ನು ಪಡೆದಿದೆ ಎಂದರ್ಥ. ಆದ್ದರಿಂದ ಭಾರತವು ತನ್ನದೇ ಆದ ಸ್ವತಂತ್ರ ವಿದೇಶಾಂಗ ನೀತಿಯನ್ನು ಪಾಲಿಸಬಹುದು.
5. **ಗಣರಾಜ್ಯ :** ರಾಷ್ಟ್ರದ ಮುಖ್ಯಸ್ಥರನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಚುನಾವಣೆಯ ಮೂಲಕ ಆಯ್ಕೆ ಮಾಡುವುದರಿಂದ ಭಾರತ ಒಂದು ಗಣರಾಜ್ಯವಾಗಿದೆ. ಭಾರತದ ರಾಷ್ಟ್ರಾಧ್ಯಕ್ಷರನ್ನು ನಿರ್ವಾಚನ ಮಂಡಳಿಯ ಮೂಲಕ ಚುನಾಯಿಸಲಾಗುತ್ತದೆ. ನಿರ್ವಾಚನಾ ಚಳುವಳಿಯು ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರು, ರಾಜ್ಯ ವಿಧಾನ ಸಭೆಗಲ ಚುನಾಯಿತ ಸದಸ್ಯರುಗಳು, ಕೇಂದ್ರಾಡಳಿತ ಪ್ರಜೆಗಳಾದ ದೆಹಲಿ ಮತ್ತು ಪುದಚೆರಿ (ಪಾಂಡಿಚೆರಿ) ವಿಧಾನ ಸಭೆಗಳ ಚುನಾಯಿತ

ಸದಸ್ಯರುಗಳನ್ನು ಒಳಗೊಂಡಿದೆ. 'ಗಣರಾಜ್ಯ' ಎಂಬ ಭಾರತ ಸರ್ಕಾರವು ಯಾವುದೇ ಅನುವಂಶೀಯ ರಾಜ ಅಥವಾ ರಾಣಿಯ ಆಳ್ವಿಕೆಗೆ ಒಳಪಟ್ಟಿಲ್ಲ ಎಂಬುದನ್ನು ಸೂಚಿಸುತ್ತದೆ.

6. **ತುರ್ತು ಪರಿಸ್ಥಿಗಳು :** ರಾಷ್ಟ್ರಾಧ್ಯಕ್ಷರು ಸಂದರ್ಗ್ಧ ಪರಿಸ್ಥಿತಿಗಳಲ್ಲಿ ಮೂರು ಬಗೆಯ ತುರ್ತು ಪರಿಸ್ಥಿತಿಗಳನ್ನು ಘೋಷಿಸುವ ಅಧಿಕಾರ ಹೊಂದಿದ್ದಾರೆ. ರಾಷ್ಟ್ರಾಧ್ಯಕ್ಷರು ವಿದೇಶಿ ಆಕ್ರಮಣ, ಸಶಸ್ತ್ರ ಬಂಡಾಯ, ಯುದ್ಧ ಈ ಕಾರಣಗಳಿಂದ ರಾಷ್ಟ್ರೀಯ ಭದ್ರತೆಗೆ ಗಂಡಾಂತರ ಒದಗಬಹುದು ಎಂದು ಭಾವಿಸಿದಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದು. ಸಂವಿಧಾನಾತ್ಮಕ ಯಂತ್ರವು ಕುಸಿದು ಬಿದ್ದ ರಾಜ್ಯಗಳನ್ನು ರಾಷ್ಟ್ರಾಧ್ಯಕ್ಷರು ತಮ್ಮ ಆಳ್ವಿಕೆಯನ್ನು ಘೋಷಿಸಬಹುದು. ಇದನ್ನು ರಾಷ್ಟ್ರಾಧ್ಯಕ್ಷರ ಆಡಳಿತ ಅಥವಾ ರಾಜ್ಯ ತುರ್ತು ಪರಿಸ್ಥಿತಿ ಎಂದು ಕರೆಯುತ್ತಾರೆ. ರಾಷ್ಟ್ರದ ಆರ್ಥಿಕ ಸ್ಥಿರತೆಗೆ ಧಕ್ಕೆಯೊದಗಿದಾಗ ರಾಷ್ಟ್ರಾಧ್ಯಕ್ಷರು ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದು. 1962ರಲ್ಲಿ ಭಾರತ ಮತ್ತು ಚೈನಾದ ನಡುವೆ ಹಾಗೂ 1971 ರಲ್ಲಿ ಭಾರತ ಮತ್ತು ಪಾಕಿಸ್ಥಾನದ ನಡುವೆ ಯುದ್ಧಗಳು ನಡೆದಾಗ ರಾಷ್ಟ್ರೀಯ ತುರ್ತು ಪರಿಸ್ತಿತಿಯನ್ನು ಘೋಷಿಸಲಾಯಿತು. 1975ರಲ್ಲಿ ಆಂತರಿಕ ಗಲಭೆಯ ಕಾರಣದಿಂದ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಯಿತು.

7. **ಪಂಚಾಯತ್‌ರಾಜ್ ವ್ಯವಸ್ಥೆ :** 73 ನೆಯ ತಿದ್ದುಪಡಿ ಕಾಯ್ದೆಯ ಮೂಲಕ 1993 ರಲ್ಲಿ ಹೊಸ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಈ ಕಾಯ್ದೆಯು 3 ಹಂತದ ಪಂದಾಯತ್ ರಾಜ್ಯ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿದೆ. ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಇವೇ ಆ ಮೂರು ಹಂತಗಳು 73ನೆಯ ತಿದ್ದುಪಡಿ ಕಾಯ್ದೆಯು ಭಾರತದ ಗ್ರಾಮೀಣ ಸ್ಥಳೀಯ ಸರ್ಕಾರಗಳ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು.

8. **ದ್ವಿಸದನ ಶಾಸಕಾಂಗ ಪದ್ಧತಿ :** ಶಾಸಕಾಂಗವಾದ ಸಂಪತ್ತು ದ್ವಿಸದನ ಪದ್ಧತಿಯ ಆಧಾರದ ಮೇಲೆ ರಚನೆಯಾಗಿದೆ. ಆದ್ದರಿಂದ ಇದು ಕೆಳಮನೆ ಮತ್ತು ಮೇಲ್ಮನೆ ಎಂಬ ಎರಡು ಸದನಗಳನ್ನು ಹೊಂದಿದೆ. ಸಂಸತ್ತಿನ ಕೆಳಮನೆಯಾದ ಲೋಕಸಭೆ ಜನರನ್ನು ಪ್ರತಿನಿಧಿಸಿದರೆ, ಮೇಲ್ಮನೆಯಾದ ರಾಜ್ಯ ಸಭೆ ರಾಜ್ಯಗಳನ್ನು ಪ್ರತಿನಿಧಿಸುತ್ತದೆ.

9. **ಸಂಯುಕ್ತ ಪದ್ಧತಿ :** ಭಾರತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂವಿಧಾನಾತ್ಮಕವಾದ ಅದಿಕಾರ ವಿಭಜನೆಯನ್ನು ಕಾಣಬಹುದು. ಆದ್ದರಿಂದ ಇದನ್ನು 'ಸಂಯುಕ್ತ ಪದ್ಧತಿ' ಎಂದು ಕರೆಯಲಾಗುತ್ತದೆ. ವಿದೇಶಾಂಗ ವ್ಯವಹಾರ, ರಕ್ಷಣೆ, ಅಂತರ್ ರಾಜ್ಯ ವ್ಯಾಪಾರ, ರೈಲ್ವೆ, ಅಂಚೆ ಮತ್ತು ತಂತಿ, ನಾಗರಿಕ ವಿಮಾನಯಾನ, ಅಮದು ಮತ್ತು ರಫ್ತು ಮುಂತಾದ ರಾಷ್ಟ್ರೀಯ ಮಹತ್ವವನ್ನು

ಪಡೆದ 100 ವಿಷಯಗಳಿಗೆ ಸಂಬಂಧಿಸಿದಮತೆ ಕಾಯ್ದೆಗಳನ್ನು ರೂಪಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಗಿದೆ. ಸಾರ್ವಜನಿಕ ಆರೋಗ್ಯ, ಪೊಲೀಸ್, ಬಂಧೀಖಾನೆ, ಸಾರ್ವಜನಿಕ ಶಾಂತಿಪಾಲನೆ, ವಾಣಿಜ್ಯ ತೆರಿಗೆ ಮುಂತಾದ ಸ್ಥಳೀಯ ಮಹತ್ವ ಪಡೆದ 61 ವಿಷಯಗಳಿಗೆ ಸಂಬಂಧಿಸಿದಂತೆ ಕಾಯ್ದೆಗಳನ್ನು ರೂಪಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿದೆ.

## ಪ್ರಸ್ತಾವನೆ

## (Preamble)

ವಿಶ್ವದ ಇತರೆ ರಾಷ್ಟ್ರಗಳ ಸಂವಿಧಾನಗಳಂತೆ ಭಾರತದ ಸಂವಿಧಾನವು ತನ್ನದೇ ಆದ ಪ್ರಸ್ತಾವನೆಯನ್ನು ಹೊಂದಿದೆ. ಈ ಪ್ರಸ್ತಾವನೆಯು ಸಂವಿದಾನದ ಮೂಲ ತತ್ವಗಳು ಹಾಗೂ ಪ್ರಜೆಗಳ ಧ್ಯೇಯೋದ್ದೇಶಗಳನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ಇದನ್ನು 'ಸಂವಿಧಾನದ ಕೈಗನ್ನಡಿ' ಎಂದು ಕರೆಯಲಾಗುತ್ತದೆ. ಪ್ರಸ್ತಾವನೆಯು ತಮ್ಮ ಸಂವಿಧಾನದ ನಿರ್ಮಾತೃಗಳ ಮನಸ್ಸಿನ ಕಪಾಟಿನ ಬೀಗವನ್ನು ತೆಗೆಯುವ ಕೀಲಿಯಿದದಂತೆ, ಜವಹರ್‌ಲಾಲ್ ನೆಹರೂರವರು 13.12.1946ರಂದು ಮಂಡಿಸಿದ ಧ್ಯೇಯಗಳ ನಿರ್ಣಯವು ನಮ್ಮ ಸಂವಿಧನದ ಪ್ರಸ್ತಾವನೆಯ ಆಧಾರವಾಗಿದೆ. ಈ ನಿರ್ಣಯವನ್ನು ಸಂವಿಧಾನದ ರಚನಾ ಸಭೆಯು ಜನವರಿ 22, 1947ರಂದು ಅಂಗೀರಿಸಿ ಅನುಮೋದಿಸಿತು. ಪ್ರಸ್ತಾವನೆಯು ನ್ಯಾಯರಕ್ಷಿತವಾದದುಲ್ಲ. ಆದ್ದರಿಂದ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸುವಂತೆ ಪ್ರಜೆಗಳು ನ್ಯಾಯಾಲಯದ ಮೊರೆ ಹೋಗುವಂತಿಲ್ಲ.

1976ರಲ್ಲಿ ಸಂವಿಧಾನಕ್ಕೆ 42ನೆಯ ತಿದ್ದುಪಡಿಯನ್ನು ತರುವುದರ ಮೂಲಕ ಪ್ರಸ್ತಾವನೆಗೆ ಸಮಾಜವಾದಿ ಜಾತ್ಯತೀತ ಮತ್ತು ಸಮಗ್ರ ಎಂಬ ಮೂರು ಪದಗಳನ್ನು ಸೇರಿಸಲಾಯಿತು. ಪ್ರಸ್ತಾವನೆಯು ಈ ರೀತಿ ಆರಂಭವಾಗುತ್ತದೆ.

ಭಾರತದ ಜನರಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ, ಗಣರಾಜ್ಯವನ್ನಾಗಿ ಪರಿವರ್ತಿಸಲು ಮತ್ತು ಎಲ್ಲಾ ಪೌರರಿಗೂ

ನ್ಯಾಯ : ಸಾಮಾಜಿ, ಆರ್ಥಿಕ ಮತ್ತು ರಾಜಕೀಯ

ಸ್ವಾತಂತ್ರ್ಯ : ವಿಚಾರ, ಅಭಿವ್ಯಕ್ತಿ, ನಂಬಿಕೆ ಮತ್ತು ಆರಾಧನೆ

ಸಮಾನತೆ : ಸ್ಥಾನಮಾನ ಮತ್ತು ಅವಕಾಶ – ಇವುಗಳನ್ನು ದೊರಕಿಸಲು

**ಭ್ರಾತೃತ್ವ :** ವ್ಯಕ್ತಿ ಗೌರವ ಹಾಗೂ ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ರಕ್ಷಿಸಿ ಭ್ರಾತೃತ್ವ ಮನೋಭಾವನೆಯನ್ನು ಮೂಡಿಸಲು ದೃಢ ಸಂಕಲ್ಪ ಮಾಡಿ ನಮ್ಮ ಸಂವಿಧಾನವನ್ನು ನವೆಂಬರ್ 26, 1949ರಂದು ಅಂಗೀಕರಿಸಿ ನಮಗೆ ನಾವೇ ಅಪಿಸಿಕೊಂಡಿದ್ದೇವೆ.

ಪ್ರಸ್ತಾವನೆಯು ಪ್ರತಿಬಿಂಬಿಸುವ ಈ ಮೇಲಿನ ಮೂಲ ತತ್ವಗಳು ಹಾಗೂ ಧ್ಯೇಯೋದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಬಹುದು.

**ಭಾರತೀಯರಾದ ನಾವು :** ನಮ್ಮ ಸಂವಿಧಾನದ ಪ್ರಸ್ತಾವನೆಯು ಭಾರತೀಯರಾದ ನಾವು ಎಂದು ಆರಂಭಗೊಂಡು ನಮ್ಮ ಸಂವಿಧಾನವನ್ನು ನವೆಂಬರ್ 26, 1949ರಂದು ಅಂಗೀಕರಿಸಿ ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ ಎಂದು ಪರಿಸಮಾಪ್ತಿಯಾಗಿದೆ. ಇದು ಭಾರತದ ಸಂವಿಧಾನವು ತನ್ನ ಪ್ರಜೆಗಳಿಂದಲೇ ರಚಿಸಲ್ಪಟ್ಟಿದೆ ಎಂಬುದನ್ನು ಸೂಚಿಸುತ್ತದೆ. ಈ ಮೂಲಕ ಪ್ರಸ್ತಾವನೆಯು ಪರಮಾಧಿಕಾರವನ್ನು ಪ್ರಜೆಗಳಿಗೆ ನೀಡಿದೆ. ಇದು ನಮ್ಮ ರಾಷ್ಟ್ರದಲ್ಲಿ ಪ್ರಜೆಗಳೇ ಪರಮಾಧಿಕಾರದ ಮೂಲ ಎಂಬುದನ್ನು ಸೂಚಿಸುತ್ತದೆ.

2. **ಸಾರ್ವಭೌಮ ರಾಷ್ಟ್ರ :** ಭಾರತವು ಸಾರ್ವಭೌಮ ರಾಷ್ಟ್ರವಾಗಿದೆ. ಇದು ಆಂತರಿಕ ಶ್ರೇಷ್ಠತೆಯನ್ನು ಹಾಗೂ ಬಾಹ್ಯ ಸ್ವಾತಂತ್ರ್ಯವನ್ನು ಪಡೆದುಕೊಂಡಿದೆ. ಅಂದರೆ ನಮ್ಮ ರಾಷ್ಟ್ರವು ಆಂತರಿಕವಾಗಿ ಸರ್ವೋಚ್ಚ ಅಧಿಕಾರವನ್ನು ಹಾಗೂ ಬಾಹ್ಯವಾಗಿ ಅನ್ಯ ರಾಷ್ಟ್ರಗಳಿಂದ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಪಡೆದಿದೆ ಎಂದರ್ಥ. ಆದ್ದರಿಂದ ಭಾರತವು ತನ್ನದೇ ಆದ ಸ್ವತಂತ್ರ ವಿದೇಶಾಂಗ ನೀತಿಯನ್ನು ಪಾಲಿಸಬಹುದು.
3. **ಸಮಾಜವಾದಿ ರಾಷ್ಟ್ರ :** ಭಾರತವನ್ನು ಒಮದು ಸಮಾಜವಾದಿ ರಾಷ್ಟ್ರವನ್ನಾಗಿ ಪರಿವರ್ತಿಸಬೇಕೆಂಬ ಪ್ರಜೆಗಳ ಆಶಯವನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ವ್ಯಕ್ತಪಡಿಸಲಾಗಿದೆ. ಈ ಆಶಯವನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ವ್ಯಕ್ತಪಡಿಸಲಾಗಿದೆ. ಈ ಆಶಯವನ್ನು ಪೂರಯಸಲು ಸಂವಿಧಾನ ನಿರ್ಮಾತೃಗಳು ರಾಜ್ಯ ನಿರ್ದೇಶನಾತ್ಮಕ ತತ್ವಗಳನ್ನು ಸಂವಿಧಾನಕ್ಕೆ ಸೇರ್ಪಡೆ ಮಾಡಿದ್ದಾರೆ. ರಾಜ್ಯ ನಿರ್ದೇಶನಾತ್ಮಕ ತತ್ವಳು ಸಮಾನ ಕೆಲಸಕ್ಕೆ ಸಮಾನ ವೇತನ, ಸಂಪತ್ತಿನ ಸಮಾನ ವಿತರಣೆ, ಪ್ರತಿಯೊಬ್ಬ ಪೌರನಿಗೆ ಜೀವನಾವಶ್ಯಕವಾದ ಸೌಲಭ್ಯಗಳನ್ನು ಒದಗಿಸುವುದು ಮುಂತಾದ ಸಮಾಜವಾದದ ತತ್ವಗಳನ್ನು ಒಳಗೊಂಡಿವೆ. ಈ ತತ್ವಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಭಾರತವನ್ನು ಒಂದು ಸಮಾಜವಾದಿ ರಾಷ್ಟ್ರವನ್ನಾಗಿ ಪರಿವರ್ತಿಸಲು ಸಂವಿಧಾನವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡುತ್ತದೆ. ಕೇಂದ್ರ ಯೋಜನಾ ಆಯೋಗ ಹಾಗೂ ರಾಜ್ಯದ ಯೋಜನಾ ಮಂಡಳಿಗಳು ತಮ್ಮ ಯೋಜನೆಗಳ ಮೂಲಕ ಬಡವರ, ದುರ್ಬಲರ ಹಾಗೂ ಅವಕಾಶ ವಂಚಿತರ ಅಭಿವೃದ್ಧಿ ಸಾಧಿಸುವ ಉದ್ದೇಶ ಹೊಂದಿದೆ. ಇದು ಭಾರತವನ್ನು ಸಮಾಜವಾದಿ

ರಾಷ್ಟ್ರವನ್ನಾಗಿ ಪರಿವರ್ತಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಸಂವಿಧಾನದ ಮೂಲ ಪ್ರಸ್ತಾವನೆಯಲ್ಲಿ 'ಸಮಾಜವಾದ' ಎಂಬ ಪದವು ಬಳಕೆಯಾಗಿರುವುದಿಲ್ಲ. 1976ರಲ್ಲಿ ಸಂವಿಧಾನದಕ್ಕೆ 42ನೆಯ ತಿದ್ದುಪಡಿಯನ್ನು ತರುವುದರ ಮೂಲಕ ಸಮಾಜವಾದ ಎಂಬ ಪದವನ್ನು ಪ್ರಸ್ತಾವನೆಗೆ ಸೇರ್ಪಡೆ ಮಾಡಲಾಯಿತು.

4. **ಜಾತ್ಯಾತೀತ ರಾಷ್ಟ್ರ :** ಜಾತ್ಯಾತೀತತೆಯ ತತ್ವವನ್ನು 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿ ಕಾಯ್ದೆಯ ಮೂಲಕ ಪ್ರಸ್ತಾವನೆಗೆ ಸೇರ್ಪಡೆ ಮಾಡಲಾಯಿತು. ಭಾರತವು ಒಂದು ಜಾತ್ಯಾತೀತ ರಾಷ್ಟ್ರವಾಗಿದೆ. ಭಾರತದ ಸಂವಿಧಾನವು ತನ್ನ ಪ್ರಜೆಗಳಿಗೆ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ (25ರಿಂದ 28ನೇ ವಿಧಿಗಳು). ಆದ್ದರಿಂದ ಪ್ರಜೆಗಳು ತಮ್ಮ ಮನಸ್ಸಾಕ್ಷಿಗನುಗುಣವಾಗಿ ಯಾವುದೇ ಧರ್ಮವನ್ನು ಪಾಲಿಸುವ ಹಾಗೂ ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ರಾಜ್ಯವು ಪ್ರಜೆಗಳ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದೆ ತಟಸ್ಥ ಧೋರಣೆಯನ್ನು ಅನುಸರಿಸುತ್ತದೆ. ಭಾರತವು ತನ್ನದೇ ಆದ ರಾಜ್ಯ ಧರ್ಮವನ್ನು ಹೊಂದಿಲ್ಲ. ಭಾರತದ ಸಂವಿಧಾನವು ಸರ್ವಧರ್ಮಗಳಿಗೆ ಸಮಾನು ಪ್ರಾಶಸ್ತ್ಯವನ್ನು ನೀಡುತ್ತದೆ.
5. **ಪ್ರಜಾಸತ್ತಾತ್ಮಕ ರಾಷ್ಟ್ರ :** ಭಾರತವು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಸತ್ತತೆಯಾಗಿದೆ. ಭಾರತದಲ್ಲಿ ಪರೋಕ್ಷ ಪ್ರಜಾಪ್ರಭುತ್ವ ಪದ್ಧತಿಯು ಆಚರನೆಯಲ್ಲಿದೆ. ನಮ್ಮ ದೇಶದಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ದತಿಯ ಮೂಲಕ ಚುನಾಯಿತರಾದ ಜನತಾ ಪ್ರತಿನಿಧಿಗಳು ಜನರ ಪರವಾಗಿ ಆಡಳಿತದಲ್ಲಿ ಭಾಗವಹಿಸುತ್ತಾರೆ. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯಲ್ಲಿ ಜಾತಿ, ಮತ, ಲಿಂಗ, ಹುಟ್ಟು ಹಾಗು ಸಾಮಾಜಿಕ ಸ್ಥಾನಮಾನ ಮುಂತಾದ ಯಾವುದೇ ತಾರತಮ್ಯವಿಲ್ಲದೆ 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಅರ್ಹ ಪ್ರಜೆಯು ಮತದಾನದ ಹಕ್ಕನ್ನು ಹೊಂದಿದ್ದಾನೆ. ನಮ್ಮ ದೇಶದಲ್ಲಿ ಸರ್ಕಾರವು ಅಂತಿಮವಾಗಿ ಪ್ರಜೆಗಳಿಗೆ ಹೊಣೆಯಾಗಿರುತ್ತದೆ. ನಮ್ಮ ಸಂವಿಧಾನವು ಪ್ರಜಾಪ್ರಭುತ್ವದ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ ಹಾಗು ಭ್ರಾತೃತ್ವಗಳಿಗೆ ಮಹತ್ವವನ್ನು ನೀಡಿದೆ.

**ಗಣರಜ್ಯ :** ರಾಷ್ಟ್ರದ ಮುಖ್ಯಸ್ಥರನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಚುನಾಯಿಸುವ ರಾಜಕೀಯ ವ್ಯವಸ್ಥೆಯನ್ನು ಗಣರಾಜ್ಯ ಎಂದು ಕರೆಯಲಾಗುತ್ತದೆ. ಭಾರತದ ಮುಖ್ಯಸ್ಥರಾದ ರಾಷ್ಟ್ರಾಧ್ಯಕ್ಷರನ್ನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡುವುದರಿಂದ ಭಾರತವು ಒಂದು ಗಣರಾಜ್ಯವಾಗಿದೆ. ಭಾರತದ ರಾಷ್ಟ್ರಾಧ್ಯಕ್ಷರನ್ನು ನಿರ್ವಾಚನ ಮಂಡಳಿಯ ಮೂಲಕ ಚುನಾಯಿಸಲಾಗುತ್ತದೆ. ನಿರ್ವಾಚನಾ ಮಂಡಳಿಯು ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರು, ರಾಜ್ಯ ವಿಧಾನ ಸಭೆಗಳ ಚುನಾಯಿತ ಸದಸ್ಯರು, ಕೇಂದ್ರಾಡಳಿತ ಪ್ರದೇಶಳಾದ ದೆಹಲಿ ಮತ್ತು ಪುದುಚೆರಿ (ಪಾಂಡಿಚೆರಿ) ವಿಧಾನ ಸಭೆಗಳ ಚುನಾಯಿತ

ಸದಸ್ಯರುಗಳನ್ನು ಒಳಗೊಂಡಿದೆ. 'ಗಣರಾಜ್ಯ' ಎಂಬ ಪದವು ಭಾರತ ಸರ್ಕಾರವು ಯಾವುದೇ ಅನುವಂಶೀಯ ರಾಜ ಅಥವಾ ರಾಣಿಯ ಆಳ್ವಿಕೆಗೆ ಒಳಪಟ್ಟಿಲ್ಲ ಎಂಬುದನ್ನು ಸೂಚಿಸುತ್ತದೆ.

**ನ್ಯಾಯ :** ಪ್ರಸ್ತಾವನೆಯು ಭಾರತೀಯವರಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು ಒದಗಿಸುವ ಉದ್ದೇಶ ಹೊಂದಿದೆ. ಸಂವಿಧಾನವು ಆರ್ಥಿಕವಾಗಿ, ಸಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಮಗಡ ಹಾಗು ಇತರೆ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಅವರಿಗೂ ಸಾಮಾಜಿಕ ನ್ಯಾಯವನ್ನು ಒದಗಿಸಿದೆ.

## ***ಪ್ರಸ್ತಾವನೆಯು ಸಂವಿಧಾನದ ಒಂದು ಭಾಗವೇ?***

ಭಾರತ ಸಂವಿಧಾನದ ಪ್ರಸ್ತಾವನೆಯು ಸಂವಿಧಾನದ ಒಂದು ಭಾಗವೇ ಅಥವಾ ಅಲ್ಲವೇ ಎಂಬುದು ಅತ್ಯಂತ ವಿವಾದಾತ್ಮಕ ವಿಷಯವಾಗಿತ್ತು. ಬೆರುಬಾರಿ ಒಕ್ಕೂಟ ಪ್ರಕರಣ (1960) ರಲ್ಲಿ ಸರ್ವೋಚ್ಚ ನ್ಯಾಯಾಲವು ಪ್ರಸ್ತಾವನೆಯು ಸಂವಿಧಾನದ ಅನೇಕ ಉಪಬಂಧಗಳ ಹಿಂದಿರುವ ಸಾಮಾನ್ಯ ಉದ್ದೇಶಗಳನ್ನು ವ್ಯಕ್ತಪಡಿದುತ್ತದೆ. ಆದ್ದರಿಂದ ಪ್ರಸ್ತಾವನೆಯು ನಮ್ಮ ಸಂವಿಧಾನದ ನಿರ್ಮಾತೃಗಳ ಮನಸ್ಸಿನ ಕಪಾಟಿನ ಬೀಗವನ್ನು ತೆಗೆಯುವ ಕೀಲಿಯಿದ್ದಂತೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಅಲ್ಲದೆ ಸಂವಿಧಾನದ ಯಾವುದೇ ವಿಧಿಯಲ್ಲಿ ಬಳಸಲಾಗಿರುವ ಪದಗಳು ಗೊಮದಲಮಯವಾಗಿದ್ದರೆ ಅಥವಾ ಒಂದಕ್ಕಿಂತ ಹೆಚ್ಚು ಅರ್ಥವನ್ನು ನೀಡುವಂತಿದ್ದರೆ ಅಂತಹ ಪದಗಳನ್ನು ಅರ್ಥೈಸಲು ಪ್ರಸ್ತಾವನೆಯಲ್ಲಿ ವ್ಯಕ್ತವಾಗಿರುವ ಉದ್ದೇಗಳ ನೆರವನ್ನು ಪಡೆಯಬಹುದು ಎಂಬುದಾಗಿಯೂ ಸರ್ವೋಚ್ಚ ನ್ಯಾಯಾಲಯ ತಿಳಿಸಿತು. ಹೀಗೆ ಪ್ರಸ್ತಾವನೆಯನ್ನು ಮಹತ್ವವನ್ನು ಗುರುತಿದರೂ ಕೂಡ ಸರ್ವೋಚ್ಚ ನ್ಯಾಯಾಲಯವು ಪ್ರಸ್ತಾವನೆ ಸಂವಿಧಾನದ ಒಂದು ಭಾಗವಲ್ಲ ಎಂಬ ನಿರ್ಧಿಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ಕೇಶವಾನಂದ ಭಾರತಿ V/s ಸ್ಟೇಟ್ ಆಫ್ ಕೇರಳ ಪ್ರಕರಣ (1973) ರಲ್ಲಿ ಸರ್ವೋಚ್ಛ ನ್ಯಾಯಾಲಯವು ತನ್ನ ಹಿಂದಿನ ಅಭಿಪ್ರಾಯ (ಪ್ರಸ್ತಾವನೆ ಸಂವಿಧಾನದ ಒಂದು ಭಾಗವಲ್ಲ) ವನ್ನು ತಿರಸ್ಕರಿಸಿ ಪ್ರಸ್ತಾವನೆಯು ಸಂವಿಧಾನದ ಒಮದು ಭಾಗ ಎಮದು ಹೇಳಿತು. ಅಲ್ಲದೆ ಸರ್ವೋಚ್ಛ ನ್ಯಾಯಾಲಯವು ಪ್ರಸ್ತಾವನೆಯ ಅತ್ಯಂತ ಮಹತ್ವವಾದದ್ದು ಮತ್ತು ಪ್ರಸ್ತಾವನೆಯಲ್ಲಿ ವ್ಯಕ್ತವಾಗಿರುವ ಮಹೋನ್ನತ ಮತ್ತು ಉದಾತ್ತ ದೃಷ್ಟಿಕೋನದ ಹಿನ್ನೆಲೆಯಲ್ಲಿ ಸಂವಿಧಾನವನ್ನು ಅಧ್ಯಯನ ಮಾಡಬೇಕು ಮತ್ತು ಅಥೈಸಬೆಕು ಎಂಬ ಅಭಿಪ್ರಾಯವನ್ನು ನೀಡಿತು. ಎಲ್.ಐ.ಸಿ ಆಫ್ ಇಂಡಿಯಾ V/s ಕನ್ಸೂಮರ್ ಎಜುಕೇಷನ್ ಆಂಡ್ ರಿಸರ್ಚ್ ಸೆಂಟರ್ ಪ್ರಕರಣ (1995) ರಲ್ಲಿಯೂ ಕೂಡ ಸರ್ವೋಚ್ಚ ನ್ಯಾಯಾಲಯವು ಪ್ರಸ್ತಾವನೆ ಸಂವಿಧಾನದ

ಅವಿಭಾಜ್ಯ ಅಂಗ ಎಂಬ ಮಾತನ್ನು ಪುನರುಚ್ಚರಿಸಿತು ಸರ್ವೋಚ್ಚ ನ್ಯಾಯಾಲಯವು ಈ ವಿಚಾರವಾಗಿ ಎರಡು ವಿಷಯಗಳನ್ನು ಸ್ಪಷ್ಟ ಪಡಿಸುತ್ತದೆ. ಅವುಗಳೆಂದರೆ;

1) ಪ್ರಸ್ತಾವನೆಯು ಶಾಸಕಾಂಗಕ್ಕೆ ಅದಿಕಾರದ ಮೂಲವೂ ಅಲ್ಲ, ಶಾಸಕಾಂಗದ ಅದಿಕಾರಗಳ ಮೇಲಿನ ನಿರ್ಬಂಧವೂ ಅಲ್ಲ.
2) ಪ್ರಸ್ತಾವನೆಯು ನ್ಯಾಯರಕ್ಷಿತವಲ್ಲದ ಅಥವಾ ನ್ಯಾಯಾಲಯದ ಮೂಲಕ ಅನುಷ್ಠಾನಗೊಳಿಸಲಾರದ ಸಂವಿಧಾನದ ಒಂದು ಭಾಗ ಎಂದು ಹೇಳಬಹುದು.

ಭಾರತದ ಸಂವಿಧಾನವು ಕೆಲವೇ ವ್ಯಕ್ತಿಗಳ ಕೈಯಲ್ಲಿ ರಾಷ್ಟ್ರದ ಆದಾಯ ಮತ್ತು ಸಂಪತ್ತು ಕೇಂದ್ರೀಕೃತತವಾಗುವುದನ್ನು ತಡೆಗಟ್ಟುವುದಕ್ಕೆ ಹಾಗೂ ಎಲ್ಲಾ ಪ್ರಜೆಗಳ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲಿಕ್ಕೆ ನೀಡುತ್ತದೆ. ಈ ಮೂಲಕ ನಮ್ಮ ಸಂವಿಧಾನವು ಆರ್ಥಿಕ ನ್ಯಾಯವನ್ನು ಒದಗಿಸುವ ಉದ್ದೇಶ ಹೊಂದಿದೆ. ಸಂವಿಧಾನವು ಜಾತಿ, ಮತ, ಲಿಂಗ ಹಾಗು ಸಾಮಾಜಿಕ ಸ್ಥಾನಮಾನ ಮುಂತಾದವುಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡದೆ ಎಲ್ಲ ಪ್ರಜೆಗಳಿಗೆ ರಾಜ್ಯಾಡಳಿತದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸುವುದಕ್ಕೆ ಅವಕಾಶ ನೀಡಿದೆ ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಲೋಕಸಬೆ, ವಿಧಾನ ಸಭೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮೀಸಲಾತಿ ನೀಡಲಾಗಿದೆ. ಇದೇ ರಾಜಕೀಯ ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ, ನ್ಯಾಯ ಎಂಬ ಪರಿಕಲ್ಪನೆಯನ್ನು 1917 ರ ರಷ್ಯಾದ ಕ್ರಾಮತಿಯಿಂದ ಪಡೆದುಕೊಳ್ಳಲಾಗಿದೆ.

***<u>ಸ್ವಾತಂತ್ರ್ಯ :</u>*** ನಮ್ಮ ಸಂವಿಧಾನವು ಪ್ರಜೆಗಳಿಗೆ ಚಿಂತನೆ, ಅಭಿವ್ಯಕ್ತಿ ಹಾಗು ಆರಾಧನಾ ಸ್ವಾತಂತ್ರ್ಯವನ್ನು ನೀಡಿದೆ. ಪ್ರಜೆಗಳು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಅಭಿವ್ಯಕ್ತಗೊಳಿಸಬಹುದು ಹಾಗೂ ತಾವು ಇಚ್ಛಿಸುವ ದರ್ಮವನ್ನು ಆರಾಧಿಸಬಹುದು.

**<u>ಸಮಾನತೆ :</u>** ಭಾರತದ ಸಂವಿಧಾನವು ತನ್ನ ಪ್ರಜೆಗಳಿಗೆ ಸಮಾನ ಸ್ಥಾನಮಾನ ಮತ್ತು ಅವಕಾಶಗಳನ್ನು ನೀಡಿದೆ. ಸಂವಿಧಾನದ ಪ್ರಕಾರ ಎಲ್ಲರೂ ಕಾನೂನಿನ ಮುಂದೆ ಸಮಾನರು. ಆದ್ದರಿಂದ ಜಾತಿ, ಮತ, ಧರ್ಮ, ಲಿಂಗ ಮತ್ತು ಸಾಮಾಜಿಕ ಸ್ಥಾನಮಾನ ಇವುಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ. ಸಂವಿಧಾನವು ಪ್ರಜೆಗಲಿಗೆ ಸಮಾನ ಆರ್ಥಿಕ, ರಾಜಕೀಯ, ಸಾಮಾಜಿಕ ಅವಕಾಶಗಳನ್ನು ನೀಡಿದೆ.

**<u>ಭ್ರಾತೃತ್ವ :</u>** ನಮ್ಮ ಸಂವಿಧಾನವು ಭಾರತೀಯರಲ್ಲಿ ಏಕತೆ ಮತ್ತು ಭ್ರಾತೃತ್ವ ಮನೋಭಾವನೆಯನ್ನು ಉಂಟುಮಾಡುವ ಉದ್ದೇಶವನ್ನು ಹೊಂದಿದೆ. ಆದ್ದರಿಂದ ಭಾರತೀಯರೆಲ್ಲರೂ ಜಾತಿ, ಮತ, ಧರ್ಮ,

ಭಾಷೆ, ಪ್ರಾಂತ್ಯ ಇವುಗಳನ್ನು ಮೀರಿ ನಾವೆಲ್ಲರು ಒಂದೇ ತಾಯಿಯ ಮಕ್ಕಳೆಂಬ ಮನೋಭಾವನೆಯನ್ನು ಬೆಳಸಿಕೊಳ್ಳಬೇಕಾಗಿದೆ. ಇದು ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗೆ ಪೂರಕವಾಗಿದೆ. ಸಮಗ್ರತೆ ಎಂಬ ಪದವನ್ನು 1976 ರ 42ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಮೂಲಕ ಪ್ರಸ್ತಾವನೆಗೆ ಸೇರಿಸಲಾಯಿತು.

## ***ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಬಹುದೇ***

ಸಂವಿಧಾನದ 368ನೇ ವಿಧಿಯಡಿಯಲ್ಲಿ ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಲು ಸಾಧ್ಯವೇ ಎಂಬ ಪ್ರಶ್ನೆ ಕೇಶವಾನಂದ ಭಾರತಿ V/s ಸ್ಟೇಟ್ ಆಫ್ ಕೇರಳ ಎಂಬ ಐತಿಹಾಸಿಕ ಪ್ರಕರಣದಲ್ಲಿ ಪ್ರಥಮ ಬಾರಿಗೆ ಉದ್ಭವವಾಯಿತು. ಪ್ರಸ್ತಾವನೆ ಸಂವಿಧಾನದ ಒಂದು ಭಾಗವಲ್ಲವಾದ್ದರಿಂದ ಅದನ್ನು ತಿದ್ದುಪಡಿ ಮಾಡಲು ಸಾಧ್ಯವಿಲ್ಲ ಎಂದು ವಾದಿಸಲಾಯಿತು. ಪ್ರಸ್ತಾವನೆಯಲ್ಲಿ ಕಂಡಬರುವ ಸಂವಿಧಾನದ ಮೂಲಭೂತ ಅಂಶಗಳನ್ನು ಅಥವಾ ಮೂಲಭೂತ ಲಕ್ಷಣಗಳನ್ನು ನಾಶಪಡಿಸಲು 368ನೇ ವಿಧಿಯಡಿಯಲ್ಲಿನ ತಿದ್ದುಪಡಿ ಅಧಿಕಾರವನ್ನು ಉಪಯೋಗಿಸುವಂತಿಲ್ಲ ಎಂಬುದು ಅರ್ಜಿದಾರರ ವಾದವಾಗಿತ್ತು.

ಆದರೆ ಸರ್ವೋಚ್ಚ ನ್ಯಾಯಾಲಯವು ಪ್ರಸ್ತಾವನೆ ಸಂವಿಧಾನದ ಒಂದು ಭಾಗ ಎಂದು ತೀರ್ಪು ನೀಡಿತು. ಈ ದಿಸೆಯಲ್ಲಿ ತಾನು ಬೆರುಬಾರಿ ಒಕ್ಕೂಟ ಪ್ರಕರಣ (1960) ರಲ್ಲಿ ನೀಡಿದ ಅಭಿಪ್ರಾಯ ತಪ್ಪು ಎಂಬ ನಿಲುವು ತಳೆಯಿತು. ಅಲ್ಲದೆ ಸರ್ವೋಚ್ಚ ನ್ಯಾಯಾಲಯವು ಸಂಸತ್ತು ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಬಹುದು ಎಂದು ತೀರ್ಪು ನೀಡಿತು.

ಕೇಶವಾನಂದ ಭಾರತಿ V/s ಸ್ಟೇಟ್ ಆಫ್ ಕೇರಳ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನಮ್ಮ ಸಂವಿಧಾನ ಎಂಬ ಸೌಧವು ಪ್ರಸ್ತಾವನೆಯಲ್ಲಿ ಹೆಸರಿಲಾಗಿರುವ ಮೂಲಭೂತ ಅಂಶಗಳ ಮೇಲೆ ನಿಂತಿದೆ. ಒಂದು ವೇಳೆ ಈ ಮೂಲಭೂತ ಅಂಶಗಲ್ಲಿ ಯಾವುದೇ ಅಂಶವನ್ನು ತೆಗೆದು ಹಾಕಿದರೆ ಸೌಧ ಉಳಿಯುವುದಿಲ್ಲ ಮತ್ತು ಅದು ಅದೇ ಸಂವಿಧಾನವಾಗಿರುವುದಿಲ್ಲ. ಅಥವಾ ತನ್ನ ಅನನ್ಯತೆಯನ್ನು ಕಾಯ್ದುಕೊಳ್ಳಲು ಅದಕ್ಕೆ ಸಾಧ್ಯವಾಗುವುದಿಲ್ಲ. ಈ ಮೂಲಭೂತ ಲಕ್ಷಣಗಳಲ್ಲಿ ಯಾವುದೇ ಲಕ್ಷಣವನ್ನು ಮತ್ತು ರಾಜಕೀಯ ವ್ಯವಸ್ಥೆಯ ಮೂಲಭೂತ ಲಕ್ಷಣಗಳನ್ನು ತೆಗೆದು ಹಾಕುವ ಅಧಿಕಾರವನ್ನು ಸಂಸತ್ತಿಗೆ ನೀಡಲಾಗಿದೆ ಎಂಬುದಾಗಿ ತಿದ್ದುಪಡಿ ಮಾಡುವ ಅಧಿಕಾರವನ್ನು ಅರ್ಥೈಸುವಂತಿಲ್ಲ ಎಂದು ತನ್ನ ತೀರ್ಪಿನಲ್ಲಿ ಸ್ಪಷ್ಟಪಡಿಸಿತು.

ಪ್ರಸ್ತಾವನೆಯನ್ನು 1976ರ 42ನೇ ತಿದ್ದುಪಡಿ ಕಾಯ್ದೆಯ ಮೂಲಕ ಇದುವರೆಗೆ ಒಂದು ಬಾರಿ ಮಾತ್ರ ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿ ಕಾಯ್ದೆಯ ಮೂಲಕ ಸಮಾಜವಾದ, ಜಾತ್ಯಾತೀತತೆ ಮತ್ತು ಸಮಗ್ರತೆ ಎಂಬ ಮೂರು ಪದಗಳನ್ನು ಪ್ರಸ್ತಾವನೆಗೆ ಸೇರ್ಪಡೆ ಮಾಡಲಾಯಿತು.

ಈ ಮೆಲಿನ ಚರ್ಚೆಯಿಂದ ಪ್ರಸ್ತಾವನೆಯು ಪ್ರಜೆಗಳಿಗೆ ಪರಮಾಧಿಕಾರವನ್ನು ನೀಡಿರುವುದು ಸ್ಪಷ್ಟವಾಗುತ್ತದೆ. ಪ್ರಸ್ತಾವನೆಯನ್ನು ನ್ಯಾಯಾಲಯದ ಮೂಲಕ ಅನುಷ್ಠಾನಗೊಳಿಸಲು ಸಾಧ್ಯವಿಲ್ಲ. ಆದರೆ ಸಂವಿಧಾನಾತ್ಮಕ ಬಿಕ್ಕಟ್ಟು ಉದ್ಭವಿಸಿದಾಗ ಸಂವಿಧಾನವನ್ನು ಅರ್ಥೈಸಲು ಪ್ರಸ್ತಾವನೆಯನ್ನು ಬಳಸಿಕೊಳ್ಳಬಹುದು. ಪ್ರಸ್ತಾವನೆಯು ಪ್ರಜೆಗಳಿಗೆ ತಮ್ಮ ಧ್ಯೇಯೋದ್ದೇಶಗಳು ಹಾಗೂ ಆದರ್ಶಗಳನ್ನು ಜ್ಞಾಪಿಸುತ್ತದೆಯಲ್ಲದೆ ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಲು ಸಹಕಾರಿಯಾಗಿದೆ. ಪ್ರಸ್ತಾವನೆಯು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಘೋಷಿಸುತ್ತದೆ. ಇದು ನಮ್ಮ (ಭಾರತದ) ರಾಜಕೀಯ ವ್ಯವಸ್ಥೆಯ ಸ್ವರೂಪವಾಗಿದೆ. ಹೀಗೆ ಪ್ರಸ್ತಾವನೆಯು ನಮ್ಮ ರಾಜಕೀಯ ವ್ಯವಸ್ಥೆಯ ಸ್ವರೂಪವನ್ನು ಸ್ಪಷ್ಟ ಪಡಿಸುತ್ತದೆ.

ಈ ಮೇಲಿನ ಕಾರನಗಳಿಂದ ಪ್ರಸ್ತಾವನೆಯು ತನ್ನದೇ ಆದ ಮಹತ್ವವನ್ನು ಹೊಂದಿದೆ. ಠಾಕೂರ್‌ದಾಸ್ ಭಾರ್ಗವ ಅವರು "ಭಾರತ ಸಂವಿಧಾನದ ಅತಿ ಮುಖ್ಯ ಭಾಗವೆಂದರೆ ಪ್ರಸ್ತಾವನೆಯಾಗಿದೆ. ಇದು ಸಂವಿಧಾನದ ಹೃದಯ ಹಾಗೂ ಒಡವೆಯಿದ್ದಂತೆ ಮತ್ತು ಅತ್ಯಂತ ವೈಭವದ ಹಾಗೂ ಸೊಗಸಾದ ಕಾವ್ಯವಿದ್ದಂತೆ" ಎಂದು ವರ್ಣಿಸಿದ್ದಾರೆ. ಕೆ.ಎಂ.ಮುನ್ಷಿಯವರು ಪ್ರಸ್ತಾವನೆಯನ್ನು "ರಾಜಕೀಯ ಜಾತಕ" ಎಂದಿದ್ದಾರೆ. ಪ್ರಖ್ಯಾತ ನ್ಯಾಯಶಾಸ್ತ್ರಜ್ಞರು ಹಾಗೂ ಸಂವಿಧಾನ ತಜ್ಞರು ಆದ ಎನ್.ಎ.ಪಾಲ್ಖಿವಾಲರವರು ಪ್ರಸ್ತಾವನೆಯನ್ನು ಸಂವಿಧಾನದ ಗುರುತಿನ ಚೀಟಿ ಎಂದು ಕರೆದಿದ್ದಾರೆ.